ದಿನಾಂಕ 03-12-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ವಾದಿಗಳು ಗಂಗರ ದೊಡ್ಡಿಯಲ್ಲಿ ವಾಸವಿಲ್ಲ ಎಂದರೆ ಸರಿ. ಆ ಊರಿನಲ್ಲಿ ಗಂಗನರಸಮ್ಮನಿಗೆ ಭಾಗದಲ್ಲಿ 1 ಮನೆ ಕೊಟ್ಟಿದ್ದರು ಎಂದರೆ ಸಾಕ್ಷಿ ಮನೆ ಕಟ್ಟಿಕೊಳ್ಳಲಿ ಎಂದು ಕೊಟ್ಟಿದ್ದರು ಎಂದು ನುಡಿಯುತ್ತಾರೆ. 20-25 ವರ್ಷಗಳು ಅವರು ಅ ಮನೆಯಲ್ಲಿ ಜೀವನ ಮಾಡಿಕೊಂಡಿದ್ದರು ಎಂದರೆ ಸರಿ. ಆ ಮನೆಯನ್ನು ನರಸಿಂಹಯ್ಯ ಜೀವಂತ ಇದ್ದಾಗಲೇ ಕೊಟ್ಟಿದ್ದರು ಎಂದರೆ ಸರಿ. ಆ ಮನೆ ಉರುಳಿ ಹೋಗಿತ್ತು ಯಾವಾಗ ಎಂದರೆ ಸಾಕ್ಷಿ ಸುಮಾರು ವರ್ಷಗಳಾಗಿವೆ. ಬೊಮ್ಮಕ್ಕ ಮತ್ತು ಅವರ ಗಂಡ ಮಕ್ಕಳು ಅವರ ಭಾಗದ ಮೆನೆಯಲ್ಲಿ ಇದ್ದರೂ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನರಸಿಂಹಯ್ಯರವರ ಭಾಗಕ್ಕೆ ಬಂದ ಜಾಗದಲ್ಲಿ ಆಕ ಸಿಸಿ ಕಟ್ಟಿದ್ದಾರೆ. ಗಂಗನರಸಮ್ಮನ ಭಾಗಕ್ಕೆ ಹೋಗಿದ್ದ ಮನೆ ಪಾಳು ಬಿದ್ದಿದೆ ಎಂದರೆ ಸರಿ. ಗಂಗನರಸಮ್ಮರವರು ಅ ಮನೆಯ ಖಾತೆಯನ್ನು ಮಾಡಿಸಿಕೊಂಡಿರಲಿಲ್ಲ. ನರಸಿಂಹಯ್ಯರವರ ಭಾಗದ ಮನೆಯನ್ನು ಖಾತೆ ಮಾಡಿಸಿಕೊಡಿದ್ದಾರೆಂದರೆ ಗೊತ್ತಿಲ್ಲ. ಗಂಗನರಸಮ್ಮರವರಿಗೆ ಮನೆ ಭಾಗ ಕೊಟ್ಟು ಸುಮಾರು 30 ವರ್ಷಗಳಾಗಿರಬಹುದು. ಅವರ ಭಾಗಕ್ಕೆ ಬಂದ ಜಮೀನಿನಲ್ಲಿ ನರಸಿಂಹಯ್ಯ ಮತ್ತು ಬೊಮ್ಮಕ್ಕ ಉಳುಮೆ ಮಾಡುತ್ತಿದ್ದಾರೆಂದರೆ ಹೌದು ಎಂದು ನುಡಿಯುತ್ತಾರೆ. ನರಸಿಂಹಯ್ಯರವರು ಮಾವಿನ ಗಿಡ ಹಾಕಿದ್ದಾರೆ ಅವಕ್ಕೆ 15-20 ವರ್ಷ ವಯಸ್ಸಾಗಿರಬಹುದು. ಅವರ ಭಾಗದ ಮಾವಿನ ಮರ ಪಸಲನ್ನು ಬೊಮ್ಮಕ್ಕ ಮತ್ತು ಮಕ್ಕಳು ಒಬ್ಬ ಮುಸ್ಲೀಮರಿಗೆ ಮಾರಾಟ ಮಾಡಿಕೊಂಡು ಬರುತ್ತಿದ್ದಾರೆ. ನರಸಿಂಹಯ್ಯ ಮಗ ಮತ್ತು ಬೊಮ್ಮಕ್ಕ ಉಳುವೆ ಮಾಡುತ್ತಿರುವ ಜಮೀನು ಅವರಿಗೆ ಮಂಜೂರಾಗಿಲ್ಲ ಎಂದರೆ ಸರಿ. ಆ ಜಮೀನುಗಳನ್ನು ಅವರು 50 ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆಂದರೆ ಸಾಕ್ಷಿ ಸುಮಾರು 30 ವರ್ಷಗಳೆಂದು ನುಡಿಯುತ್ತಾರೆ. ಅವರು ಉಳುಮೆ ಮಾಡುತ್ತಿರುವ ಪಕ್ಕದ

ಜಮೀನಿನಲ್ಲಿ ನಾನು ಸಹ ಉಳುಮೆ ಮಾಡುತ್ತಿದ್ದೇನೆ ಅದು ನನಗೂ ಮಂಜೂರಾಗಿಲ್ಲ. ಆ ಜಮೀನುಗಳ ಸಂಬಂಧ ನಮಗೂ ಮತ್ತು ನರಸಿಂಹಯ್ಯರವರಿಗೂ ಹಲವು ಬಾರಿ ಮನಸ್ತಾಪ ಆಗಿದೆ ಎಂದರೆ ಸರಿಯಲ್ಲ. ನಿಮಗೂ ನರಸಿಂಹಯ್ಯರವರಿಗೂ ಯಾವ ವಿಷಯಕ್ಕೆ 7-8 ವರ್ಷಗಳ ಹಿಂದೆ ಮನಸ್ತಾಪವಾದದ್ದು ಎಂದರೆ ಸಾಕ್ಷಿ ಆಗಿಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಲ್ಲಿ ಅವರಿಗೂ ನಮಗೂ ದೂರು ಸಹ ಆಗಿತ್ತು ಎಂದರೆ ಸರಿಯಲ್ಲ. ಮನಸ್ತಾಪವನ್ನೇ ಆಧಾರವಾಗಿಟ್ಟುಕೊಂಡು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳು ಮನೆಯ ವಿಚಾರ ಏನು ಗೊತ್ತಿಲ್ಲದಿದ್ದರೂ ಸಹ ಅವರಿಗೆ ಅನೂಕೂಲ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಾರೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.